Reg. No. | | | | | | | | |

**BCM KAL 253**

## ಗುಣಾಂಕ ಆಧಾರಿತ ನಾಲ್ಕನೆಯ ಚತುರ್ಮಾಸ ಬಿ.ಕಾಂ. ಪದವಿ ಪರೀಕ್ಷೆ, ಏಪ್ರಿಲ್/ಮೇ 2018
## (Common to all Batches)
## ಕನ್ನಡ ಭಾಷಾ ಪತ್ರಿಕೆ

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 80

### ಭಾಗ - 1 (ಕಾವ್ಯ)

I. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ : (1×8=8)

1) ಹಿಂಸಾನಿರತ ಮಾರಿದತ್ತನ ಮನಸ್ಸು ಪರಿವರ್ತನೆಗೊಂಡ ಸನ್ನಿವೇಶವನ್ನು ವಿವರಿಸಿರಿ.

2) ಚೆಂಡನ್ನು ಬೇಡಿದ ಕುಮಾರರಾಮನಿಗೆ ತಾಯಿ ಹೇಳಿದ ಬುದ್ಧಿವಾದಗಳೇನು ?

ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ : (1×6=6)

1) ಪ್ರಕೃತಿಯಲ್ಲಿ ದೇವರನ್ನು ಕಾಣುವ ಪರಿ ಕವನದಲ್ಲಿ ಹೇಗೆ ಮೂಡಿದೆ ? ವಿವರಿಸಿರಿ.

2) ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಚೆನ್ನಮ್ಮನ ಧೈರ್ಯ ಸಾಹಸಗಳು ಹೇಗೆ ವ್ಯಕ್ತಗೊಂಡಿದೆ ?

ಇ) ಕೆಳಗಿನವುಗಳಲ್ಲಿ ಒಂದು ವಿಷಯದ ಕುರಿತು ಟಿಪ್ಪಣಿ ಬರೆಯಿರಿ. (1×4=4)

1) ಜನ್ನ 2) ಸಂಗೊಳ್ಳಿ ರಾಯಣ್ಣ

II. ಅ) ಒಂದು ಪದ್ಯಭಾಗದ ಸಂದರ್ಭವನ್ನು ಸೂಚಿಸಿ ಭಾವಸ್ವಾರಸ್ಯವನ್ನು ವಿವರಿಸಿರಿ. (1×5=5)

1) ಇಂತಿಂತೊರ್ವರನೊರ್ವರ್
ಸಂತೈಸುತ್ತುಂ ನೃಪೇಂದ್ರ ತನುಜಾತರ್ ನಿ
ಶ್ಚಿಂತಂ ಪೊಕ್ಕರ್ ಪಸಿದ ಕೃ
ತಾಂತನ ಬಾಣಸುವೊಲಿರ್ದ ಮಾರಿಯ ಮನೆಯಂ

2) ಮಂಡೆ ತುಂಬಿದ ಕಾರ್ಯವಿದ್ದು ನಿನಗೆ ರಾಮ
ಚೆಂಡಾಟ ಕೆಳಸಿತೆ ಚಿತ್ತ
ಕಂಡವರಿವನೇತಱವನೆಂದೆನ್ನದೆ
ಕೊಂಡಾಡುವರೆ ನಿನ್ನನವರು

(2×4=8)

ಆ) ಕೆಳಗಿನ ವಾಕ್ಯಗಳಲ್ಲಿ **ಎರಡರ** ಸಂದರ್ಭವನ್ನು ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ :

1) ತರುಣ ವನಹರಿಣಯುಗಮಂ ತರಕ್ಷು ಪಿಡಿವಂತೆ

2) ಕಳ್ಳರಿಗೆ ತಾ ವೀರಸ್ವರ್ಗ ದೊರಕುವುದೆ ?

3) ನಿನ್ನ ಮುತ್ತಾತನನ್ನು ಕೇಳು
ನನ್ನನ್ನು ಯಾಕೆ ಬಿಚ್ಚಿಟ್ಟ ಎಂದಿತು

(1×4=4)

ಇ) ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ :

1) ಚರಿಗೆಗೆ ಬೀಳ್ಕೊಡೆ – ಇಲ್ಲಿ 'ಚರಿಗೆ' ಎಂದರೇನು ?

2) ಬ್ರಿಟಿಷರನ್ನು ವಿರೋಧಿಸಿದ ಪ್ರಥಮ ಭಾರತೀಯ ನಾರಿ ಯಾರು ?

3) ಕುಮಾರರಾಮನ ತಂದೆಯ ಹೆಸರೇನು ?

4) ಕುವೆಂಪು ಅವರಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿಸಿಕೊಟ್ಟ ಕೃತಿ ಯಾವುದು ?

## ಭಾಗ - 2 (ಮಹಾಕಾವ್ಯ)

(1×8=8)

III. ಅ) ಕೆಳಗಿನ ಪ್ರಶ್ನೆಗಳಲ್ಲಿ **ಒಂದಕ್ಕೆ** ಉತ್ತರಿಸಿರಿ :

1) ಶಾಕ್ಯ ಸೇನಾಪತಿ ಮತ್ತು ಗೌತಮರ ನಡುವೆ ನಡೆದ ಸಂವಾದದ ಸ್ವಾರಸ್ಯವನ್ನು ಚಿತ್ರಿಸಿ.

2) ಯಶೋಧರೆಯ ಸ್ವಯಂವರದಲ್ಲಿ ಗೌತಮ ಭಾಗಿಯಾದಾಗ ನಡೆದ ಘಟನೆಯನ್ನು ವಿವರಿಸಿ.

(1×5=5)

ಆ) ಕೆಳಗಿನ ಪ್ರಶ್ನೆಗಳಲ್ಲಿ **ಒಂದಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿರಿ :

1) ಶ್ರೀಮಂತನಾದ ಯಶಸ್ ಭೋಗ ವಿಮುಖನಾದ ಸನ್ನಿವೇಶವನ್ನು ಚಿತ್ರಿಸಿ.

2) ಬಾಣ ತಾಗಿದ ಪಕ್ಷಿಗಾಗಿ ಗೌತಮನು ಪರಿತಪಿಸುವ ಪರಿಯನ್ನು ಚಿತ್ರಿಸಿ.

(2×1=2)

ಇ) ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ :

1) ಗೌತಮನ ಪುತ್ರನ ಹೆಸರೇನು ?

2) ಚೆನ್ನಜ್ಜ ಯಾರು ?

## ಭಾಗ - 3 (ಗದ್ಯ)

(1×8=8)

IV. ಅ) ಕೆಳಗಿನ ಪ್ರಶ್ನೆಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ :

1) ತಾಳಮದ್ದಳೆ ಎಂಬ ಮಾತಿನ ಕಲೆಯ ಅನನ್ಯತೆಯನ್ನು ವಿಮರ್ಶಿಸಿರಿ.

2) ಪ. ರಾಮಕೃಷ್ಣ ಶಾಸ್ತ್ರಿಯವರು ವಿವರಿಸುವಂತೆ ಸಾಮಾಜಿಕ ಮತ್ತು ಕೌಟುಂಬಿಕ ಸಂಬಂಧಗಳು ಉನ್ನತವೆನಿಸುವುದು ಯಾವಾಗ ? ಚರ್ಚಿಸಿರಿ.

ಆ) **ಒಂದಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ಬೋಧಿಸತ್ವನ ಕತೆಯಲ್ಲಿ ಕಾಣುವ ಸವಿಮಾತಿನ ಶಕ್ತಿಯನ್ನು ವಿವರಿಸಿರಿ.

2) ಅನಾಥನ ಶವಸಂಸ್ಕಾರವು ಸ್ವಾರ್ಥಕ್ಕೆ ಬಳಕೆಗೊಳ್ಳುವುದನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ ? ವಿವರಿಸಿ.

ಇ) ಕೆಳಗಿನ ಪ್ರಶ್ನೆಗಳಲ್ಲಿ **ಪ್ರತಿಯೊಂದಕ್ಕೂ ಒಂದು** ವಾಕ್ಯದಲ್ಲಿ ಉತ್ತರಿಸಿರಿ. **(2×1=2)**

1) ಬೀಚಿ ಅವರ ನಿಜನಾಮ ಯಾವುದು ?

2) ಶೇಣಿ ಗೋಪಾಲಕೃಷ್ಣ ಭಟ್ ಯಾವುದಕ್ಕೆ ಪ್ರಸಿದ್ಧರು ?

## ಭಾಗ - 4 (ಕ್ರಿಯಾತ್ಮಕ ಕನ್ನಡ)

V. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಶಬ್ದಕೋಶವೆಂದರೇನು ? ಅದರ ವಿಧಗಳು ಯಾವುವು ? ವಿವರಿಸಿ.

2) ಸಮಾನಾರ್ಥಕ ಪದಕೋಶ ಎಂದರೇನು ? ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ಪಡೆನುಡಿ ಎಂದರೇನು ? ಉದಾಹರಣೆ ನೀಡಿ.

2) ಅವನೊಂದು ಮೃಗ ಹಾಗೂ ಅವನೊಂದು ಪ್ರಾಣಿ – ಈ ಎರಡರ ಅರ್ಥಛಾಯೆಯ ವ್ಯತ್ಯಾಸವೇನು ? ವಿವರಿಸಿ.

ಇ) ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ : **(2×1=2)**

1) 'ಕನ್ನಡ ಪದನಿಧಿ' ಯ ಸಂಪಾದಕ ಯಾರು ?

2) 'ಸೂರ್ಯ' ಪದದ ಸಮಾನಾರ್ಥಕಗಳಾವುವು ?